ದೂರವಾಣಿ-0836-2215328 Phone : 0836-2215328

# ಕರ್ನಾಟಕ ವಿಶ್ವವಿದ್ಯಾಲಯ

KARNATAK UNIVERSITY, DHARWAD

**Scholarship Section**

***Email : scholarship@kud.ac.in***

ನಂ.ಕವಿವಿ/ಶಿವೇ/2026/1389 ದಿನಾಂಕ: 13-03-2026

**-:ಸುತ್ತೋಲೆ:-**

**ವಿಷಯ:-ಪ್ರೊ. ಎ. ಎಂ. ಪಠಾಣ, ಸನ್ಮಾನ ಸಮಿತಿಯ ಪ್ರೊ. ಎ. ಎಂ. ಪಠಾಣ ಶಿಷ್ಯವೇತನ ಮಂಜೂರಾತಿಗಾಗಿ ಅರ್ಜಿ ಅಹ್ವಾನಿಸಿದ ಕುರಿತು**

**ಉಲ್ಲೇಖ:- 1) ಸಿಂಡಿಕೇಟ್ ನಿರ್ಣಯ ನಂ.28 ದಿನಾಂಕ: 09-06-2004.**
**2) ವಿದ್ಯಾವಿಷಯಕ ಪರಿಷತ್ ಸಭೆಯ ನಿರ್ಣಯ ನಂ.33 ದಿನಾಂಕ: 24-07-2004.**
**3) ಕುಲಪತಿಗಳ ಆದೇಶ ದಿನಾಂಕ: 05.03.2026**

*****

**ಸನ್ 2024-25ನೇ ಸಾಲಿಗೆ ಸ್ನಾತಕೋತ್ತರ ಪದವಿಯ ಪ್ರಥಮ ವರ್ಷಕ್ಕೆ (1 ಮತ್ತು 2ನೇ ಸೆಮಿಸ್ಟರ್‌ಗೆ) ಸಮಾಜ-ವಿಜ್ಞಾನ ನಿಖಾಯದ ಅಧ್ಯಯನಕ್ಕೆ ಪ್ರವೇಶ ಪಡೆದು ಸನ್ 2025-26ನೇ ಸಾಲಿಗೆ ಅಂತಿಮ (3 & 4ನೇ ಸೆಮಿಸ್ಟರ್‌ದಲ್ಲಿ) ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಕರ್ನಾಟಕ ವಿಶ್ವವಿದ್ಯಾಲಯದ 2024-25ನೇ ಸಾಲಿನ ಒಳ್ಳೆಯ ವಿದ್ಯಾರ್ಥಿ' (Best Student) ಎಂದು ನಿರ್ಣಯಿಸಲ್ಪಡುವ ವಿದ್ಯಾರ್ಥಿಗೆ ಪ್ರೊ.ಎ.ಎಂ.ಪಠಾಣ ಶಿಷ್ಯವೇತನ ಮಂಜೂರು ಮಾಡಲು ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ.**

**1. ಸಮಾಜ-ವಿಜ್ಞಾನ ನಿಖಾಯದ ಸ್ನಾತಕೋತ್ತರ ಪ್ರಥಮ ವರ್ಷದ (1 ಹಾಗೂ 2ನೇ ಸೆಮಿಸ್ಟರ್) ಪದವಿಯನ್ನು 2024-25 ರಲ್ಲಿ ಪಾಸಾಗಿ ಪ್ರಸ್ತುತ ಸನ್ 2025-26ನೇ ಶೈಕ್ಷಣಿಕ ವರ್ಷದಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ (3ಮತ್ತು 4ನೇ ಸೆಮಿಸ್ಟರನಲ್ಲಿ) ಓದುತ್ತಿರುವ ವಿದ್ಯಾರ್ಥಿಗಳು ಈ ಶಿಷ್ಯವೇತನಕ್ಕೆ ಅರ್ಜಿ ಸಲ್ಲಿಸಬಹುದು.**

**<u>2.ಅರ್ಹತೆ:-</u>ಶಿಷ್ಯವೇತನಕ್ಕೆ ಈ ಕೆಳಗಿನ ಅರ್ಹತೆಗಳನ್ನಾಧರಿಸಿ ವಿದ್ಯಾರ್ಥಿಯನ್ನು ಆಯ್ಕೆ ಮಾಡಲಾಗುವುದು. ಅ) ವಿದ್ಯಾರ್ಹತೆ ಬ) ಇತರೆ ಚಟುವಟಿಕೆಗಳು ಕ) ವೈಯಕ್ತಿಕ ಸಂದರ್ಶನ**

**ಅ) ವಿದ್ಯಾರ್ಹತೆ: (Educational Qulification):- ಎಸ್.ಎಸ್.ಎಲ್.ಸಿ.ಯಿಂದ ಸ್ನಾತಕೋತ್ತರ ಪ್ರಥಮ ವರ್ಷದ ಪದವಿ (1$^{st}$ and 2$^{nd}$ Semester) ಯನ್ನು ಪ್ರಥಮ (1$^{st}$ Atttempt) ಯತ್ನದಲ್ಲಿ, ಪ್ರಥಮ (1$^{st}$ Class) ವರ್ಗದಲ್ಲಿ ಪಾಸಾಗಿರಬೇಕು.**

**ಬ) ಇತರೆ ಚಟುವಟಿಕೆಗಳು: (Extra-Curricular Activities):-ಇತರೆ ಚಟುವಟಿಕೆಗಳಲ್ಲಿ ಭಾಗವಹಿಸಿದ ಎಲ್ಲ ಪ್ರಮಾಣ ಪತ್ರಗಳನ್ನು ಸಲ್ಲಿಸುವುದು.**

**ಕ) ಸಂದರ್ಶನ: (Interview):- ಅರ್ಹ ವಿದ್ಯಾರ್ಥಿಗಳಿಗೆ ಮೌಖಿಕ ಸಂದರ್ಶನವನ್ನು ಸಂಬಂಧಿಸಿದ ಆಯ್ಕೆ ಸಮಿತಿಯಿಂದ ನಡೆಸಲಾಗುವದು.**

**<u>3. ಶಿಷ್ಯವೇತನ ಬಾಬತ್ತು ಮತ್ತು ಅವಧಿ:-</u>**

**ಆಯ್ಕೆಗೊಂಡ ವಿದ್ಯಾರ್ಥಿಗೆ ಪ್ರೊ. ಎ. ಎಂ. ಪಠಾಣ ಶಿಷ್ಯವೇತನ ದತ್ತಿ ನಿಧಿಯಿಂದ ಬರುವ ಘಾರ್ಷಿಕ ಬಡ್ಡಿಯಿಂದ ಗರಿಷ್ಠ ರೂ. 10,000/- (ತಿಂಗಳಿಗೆ ರೂ.1,000/- ರಂತೆ 10 ತಿಂಗಳ ಅವಧಿಗೆ) ಇಲ್ಲವೇ ಈ ದತ್ತಿ ನಿಧಿಯಿಂದ ಬರುವ ಬಡ್ಡಿಯನ್ನಾಧರಿಸಿ ಸಮಿತಿ ನಿರ್ಧರಿಸುವ ಮೊತ್ತ ಯಾವುದು ಕಡಿಮೆಯೋ ಅಷ್ಟನ್ನು ಮಾತ್ರ ಶಿಷ್ಯವೇತನ ನೀಡಲಾಗುವದು.**

**Contd...2....**

<u>4. ಅರ್ಜಿ ಸಲ್ಲಿಸುವ ವಿಧಾನ:-</u>

1) ನಿಗದಿ ಪಡಿಸಿದ ಅರ್ಜಿಯನ್ನು ಶಿಷ್ಯವೇತನ ವಿಭಾಗದಿಂದ ಪಡೆದು, ಭರ್ತಿ ಮಾಡಿ, ಸಂಬಂಧಿಸಿದ ವಿಭಾಗದ ಮುಖ್ಯಸ್ಥರ ಸಹಿಯೊಂದಿಗೆ ದಿನಾಂಕ: <u>10-04-2026</u> ರೊಳಗಾಗಿ ಸಲ್ಲಿಸುವುದು.

2) ಅರ್ಜಿಯ ಜೊತೆಗೆ, (1)ಎಸ್.ಎಸ್.ಎಲ್.ಸಿ. (2)ಪಿ.ಯು.ಸಿ.(1st & 2nd Year) (3)ಸ್ನಾತಕ ಪದವಿ (1st to 6th Semesters) ಹಾಗೂ (4) ಸ್ನಾತಕೋತ್ತರ ಪದವಿಯ ಪ್ರಥಮ ವರ್ಷದ (1st & 2nd Semesters) ಅಂಕಪಟ್ಟಿಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸುವುದು ಹಾಗೂ ಇತರೆ ಚಟುವಟಿಕೆಗಳ (Extra-Curricular Activities) ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಗಳನ್ನು ಅಗತ್ಯವಾಗಿ ಸಲ್ಲಿಸುವುದು.

5. ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ವಿಶ್ವವಿದ್ಯಾಲಯ ಕೈಗೊಳ್ಳುವ ನಿರ್ಣಯವೇ ಅಂತಿಮವಾಗಿರುತ್ತದೆ.

Sd/-
ಕುಲಸಚಿವರು

ಪ್ರತಿ ಸಾದರಪೂರ್ವಕವಾಗಿ:-

1. ಸಮಾಜ-ವಿಜ್ಞಾನ ನಿಖಾಯದ ಎಲ್ಲ ಸ್ನಾತಕೋತ್ತರ ವಿಭಾಗಗಳ ಮುಖ್ಯಸ್ಥರುಗಳು, ಕ.ವಿ.ವಿ. ಧಾರವಾಡ, ಕ.ವಿ.ವಿ. ಸ್ನಾತಕೋತ್ತರ ಕೇಂದ್ರ ಕಾರವಾರ/ ಗದಗ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯರ ಮಾಹಿತಿಗಾಗಿ ಕಳುಹಿಸಲಾಗಿದೆ. ಮುಂದುವರೆದು ಈ ವಿಷಯವನ್ನು 2025-26ನೇ ಸಾಲಿನಲ್ಲಿ ಅಂತಿಮ ವರ್ಷದ ಸ್ನಾತಕೋತ್ತರ ಪದವಿಯಲ್ಲಿ (3 ಮತ್ತು 4ನೇ ಸೆಮಿಸ್ಟರ) ಓದುತ್ತಿರುವ ವಿದ್ಯಾರ್ಥಿ/ನಿಗಳ ಗಮನಕ್ಕೆ ತಪ್ಪದೆ ತರಲು ಹಾಗೂ ಅರ್ಹ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಂತೆ ತಿಳಿಸಲು ಕ್ರಮಕೈಗೊಳ್ಳಬೇಕೆಂದು ಕೋರಲಾಗಿದೆ.
2. ಪ್ರೊ. ಎ. ಎಂ. ಪಠಾಣ, ಸನ್ಮಾನ ಸಮಿತಿಯ ಸಂಯೋಜಕರು,
   ಅ) ಡಾ. ಕೆ. ಗೌಡರೆಡ್ಡಿ, ನಿವೃತ್ತ ಪ್ರಾಧ್ಯಾಪಕರು, ಕಲ್ಯಾಣ ನಗರ, ಧಾರವಾಡ.
   ಬ) ಪ್ರೊ. ಅಬ್ದುಲ್ ಕರೀಂ, ಮಾಜಿ ಸಿಂಡಿಕೇಟ್ ಸದಸ್ಯರು, ನವನಗರ, ಹುಬ್ಬಳ್ಳಿ ಇವರ ಮಾಹಿತಿಗಾಗಿ.
3. ವಿತ್ತಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರು, ಐಟಿ ವಿಭಾಗ, ಕ.ವಿ.ವಿ. ಧಾರವಾಡ.
5. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
6. ಕುಲಸಚಿವರ ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.